# ಹಿಡಕೋ ಬಿಡಬೇಡ ರಂಗನ ಪಾದ

1. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 610.
2. **Note:** This song is not available in other books that I referred.
3. **Note:** Singer has followed these lyrics.

ರಾಗ: ಪೂರ್ವಿಕಲ್ಯಾಣಿ ತಾಳ: ಆದಿ

ಹಿಡಕೋ ಬಿಡಬೇಡ ರಂಗನ ಪಾದ || ಪ ||

ಹಿಡಕೋ ಬಿಡಬೇಡ ಕೆಡುಕ ಕಾಳಿಂಗನ
ಮಡುವಿನೊಳ್ ಧುಮುಕಿ ಕುಣಿದಾಡೊ ಕೃಷ್ಣನ ಪಾದ || ಅಪ ||

ಪುಟ್ಟಿದಾಗಲೆ ಇವ ದುರ್ಜನನೆನುತಲಿ
ಅಟ್ಟಿದರಾಗಲೆ ತಾಯ್ತಂದೆಯರು
ಮುಟ್ಟಿ ತನಗೆ ಮೊಲೆಗೊಟ್ಟಳ ಮಡುಹಿದ
ದುಷ್ಟ ಕೃಷ್ಣನ ಹೋಗಬಿಟ್ಟರೆ ಸಿಕ್ಕನು || 1 ||

ಒಚ್ಚೊತ್ತನ್ನಕೆ ನಡೆದರೆ ಬಂಡಿಯ
ನುಚ್ಚು ಮಾಡಿ ಕಾಲಲಿ ಒದ್ದ
ಶಿಕ್ಷಿಸಲು ಜೋಡು ವೃಕ್ಷವ ತರಿದಿಟ್ಟ
ರಚ್ಚೆಗಾರನೆಂದು ಬೆಚ್ಚದೆ ಜಗದೊಳು || 2 ||

ಇದ್ದಲ್ಲಿ ಇರನಿವ ಬುದ್ಧಿ ಎಳ್ಳಷ್ಟಿಲ್ಲ
ಹದ್ದನೇರಿ ತಿರುಗಾಡುವನು
ಮೆದ್ದೆಯಾತಕೆ ಮಣ್ಣ ತೆಗೆ ಬಾಯನೆಂದರೆ
ಆದ್ಯಂತ ಜಗವನು ತೋರಿ ಅಂಜಿಸಿದನ || 3 ||

ಮಕ್ಕಳೊಳಗೆ ಪುಂಡ ಮನೆ ಮನೆಗಳ ಹೊಕ್ಕು
ಸಕ್ಕರೆ ನೊರೆಹಾಲು ಸವಿಸವಿದು

ಬೆಕ್ಕಿನ ಮೇಲಿಟ್ಟು ಬೆಣ್ಣೆಯ ತಾ ಮೆದ್ದು
ಸಿಕ್ಕದೆ ಜಿಗಿದೋಡಿ ಪೋಗುವ ಕಳ್ಳನ || 4 ||

ಸಾರ ಹೃದಯನಲ್ಲ ಭಾರಿಯ ಗುಣವಿಲ್ಲ
ಆರ ಮಾತನು ಇವ ಲೆಕ್ಕಿಸನು
ನೀರೊಳಗಿಳಿದು ನಾರೇರ ಸೀರೆಯ ಕದ್ದು
ಹಾರಿ ಹೊನ್ನೆಯ ಮರವೇರಿದ ಕೃಷ್ಣನ || 5 ||

ಕಾಳ ರಕ್ಕಸರೊಳು ಕದನ ಬೇಡೆಂದರೆ
ಹೇಳಿದ ಹಾಗೆ ಕೇಳುವನಲ್ಲ
ಕೂಡೆ ಆಡುವ ಮಕ್ಕಳಂಜಿಕೊಂಡರಾಗ
ಗಾಳಿಯ ಮುರಿದಿಟ್ಟ ಗೈಯಾಳಿ ರಂಗನ || 6 ||

ಜೀರಿಗೆ ಬೆಲ್ಲವ ಹಿಡಿದಂಬಿಕೆಯನು
ಸಾರಿ ಬಂದ ರುಕ್ಮಿಯನು ಕೊಂದು
ಹೋರಬೇಡೆಂದರೆ ರುಕ್ಮನ ಹೆಡೆಗಯ್ಯ
ತೇರಿಗೆ ಬಿಗಿದಂಥ ಚೋರ ಕೃಷ್ಣನ ಪಾದ || 7 ||

ಅಟ್ಟಿ ಹಾಯುವ ಏಳು ಗೂಳಿಗಳನ್ನು
ಕಟ್ಟಿ ಸತ್ರಾಜಿತಗೆ ರತ್ನವಿತ್ತು
ಅಷ್ಟ ಮಹಿಷಿಯರ ಅರ್ತಿಯ ಸಲಿಸಿದ
ಸೃಷ್ಟಿಗೊಡೆಯ ಶ್ರೀ ಕೃಷ್ಣನ ಪಾದವ || 8 ||

ಇರುಳೊಳು ಹೆಂಗಳ ಕೂಡಿ ಆಡುತಲಿ
ವರ ಯಮುನೆಯ ತೀರದಿ ನಿಂತ
ಬರಿಮಾತಿಲ್ಲದಿನಾರು ಸಾವಿರ ತರಳೇರ
ಮರುಳು ಮಾಡಿದ ಈ ಮದನ ಗೋಪಾಲನ || 9 ||

ಘಕ್ಕನೆ ಮಥುರೆಗೆ ಪೋಗಿ ಬರುವೆನೆಂದು
ಅಕ್ಕಯ್ಯ ಗೋಪಿಗೆ ಪೇಳುತಲಿದ್ದ
ಘಕ್ಕನೆ ಬಲರಾಮನೊಡಗೂಡಿ ರಥವೇರಿ
ಸಿಕ್ಕದೆ ಹೋಗುವ ಅಕ್ರೂರ ವರದನ || 10 ||

ಆನೆಯ ಮಡುಹಿದ ಅಗಸನ ಕೆಡಹಿದ
ತಾನರಸಗೆ ತಂದ ಹೂವನೆ ಮುಡಿದ
ಮಾನಿನಿ ಕುಬುಜೆಗೊಲಿದು ಗಂಧ ಧರಿಸಿದ
ಗಾನ ವಿನೋದಿ ಶ್ರೀ ಲಕುಮಿಯ ಅರಸನ || 11 ||

ಮಲ್ಲರನೆಲ್ಲರ ಚೆಲ್ಲಾಡಿ ಕೆಡಹಿದ
ಬಿಲ್ಲು ಮುರಿದು ಮಾವನ ಮಡುಹಿ
ನಿಲ್ಲದೆ ದೇವಕಿ ಸೆರೆಯನು ಬಿಡಿಸಿದ
ಫುಲ್ಲಲೋಚನ ಶ್ರೀ ಕೃಷ್ಣನ ಪಾದವ || 12 ||

ನರ ಕುರಿಗಳನೆಲ್ಲ ಭರದಿ ರಕ್ಷಿಪುದಕ್ಕೆ
ಪರಮ ಪಾವನ ನಾಮ ಇದು ಸಾಲದೆ
ಕರಿ ಧ್ರುವ ಬಲಿ ಪಾಂಚಾಲಿಗೆ ವರವಿತ್ತ
ಪುರಂದರ ವಿಠಲನ ಚರಣ ಕಮಲವನು || 13 ||

**Classification:** Keerthane
**Ankita:** purandara vittala
**Location:** NA
**Category:** Krishna Stuti,
**Sub-Category:** Krishna, ranga, kalinga, tande, tayi, putani, mara, loka, buddi, garuda, bayi, makkalu, mane, sakkare, halu, benne, kalla, hrudaya, niru, gopi, asura, ADu, bella, rukmi, satrajita, ratna, hengasu, nadi, Gopala, mathura, Balarama, ratha, akrura, gaja, hoovu, gandha, arasa, billu, kamsa, Devaki, kuri, Dhruva, draupadi, bali, padma,
**Pravachana:** NA
**Explanation:** NA